ಎಚ್ಚರಿಕೆ

ಸೋಮವಾರ ಸೆಪ್ಟಂಬರ್ 16, 2019

# ಪಿಇಎಸ್‌ಐಎಎಂಎಸ್‌ನಲ್ಲಿ ಸಿಎ ಮತ್ತು ಸಿಎಸ್ ಫೌಂಡೇಶನ್ ಕೋರ್ಸ್



ಶಿವಮೊಗ್ಗ: ಇಂದು ನಗರದ ಪಿಇಎಸ್‌ಐಎಎಂಎಸ್ ಕಾಲೇಜಿನಲ್ಲಿ CA ಮತ್ತು CS Foundation Course ಗಳನ್ನು ಉದ್ಘಾಟಿಸಲಾಯಿತು. Proedge Skill Development and Edutech Pvt. Ltd., Bengaluru ಇದರ ಸಹ ಸಂಸ್ಥಾಪಕ ಶ್ರೀರಾಮ್ ವಂಶಿಯವರು ಕೋರ್ಸ್‌ನ್ನು ಉದ್ಘಾಟಿಸುವುದರ ಮೂಲಕ ಅಧಿಕೃತ ಚಾಲನೆಯನ್ನು ನೀಡಿದರು.

ಅವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತಾ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ವಿಫಲತೆ ಸಾಮಾನ್ಯ. ಮೊದಲ ಪ್ರಯತ್ನದಲ್ಲಿ CA ಹಾಗೂ CS ನಂತಹ ಪರೀಕ್ಷೆಗಳಲ್ಲಿ ತೇರ್ಗಡೆಯಾಗುವುದು ಸುಲಭವಲ್ಲ, ಅಂದಮಾತ್ರಕ್ಕೆ ಈ ಕುರಿತು ಹೆದರಿಕೆ ಮತ್ತು ಹಿಂಜರಿಕೆಗಳನ್ನು ಬೆಳೆಸಿಕೊಳ್ಳುವ ಅಗತ್ಯವಿಲ್ಲ. ಸೋಲಿಗೆ ಧೃತಿಗೆಡದೆ ಸೋಲನ್ನು ಗೆಲುವಿನ ಸೋಪಾನವಾಗಿ ಮಾಡಿಕೊಳ್ಳಬೇಕು ಎಂದರು.

ಈ ಪರೀಕ್ಷೆಗಳ ಕುರಿತಾಗಿ ಯಾವುದೇ ರೀತಿಯ ಗೊಂದಲ ಹಾಗೂ ಅನುಮಾನಗಳಿದ್ದಲ್ಲಿ ನಮ್ಮ ತಜ್ಞ ತರಬೇತುದಾರರು ಅದನ್ನು ನಿವಾರಿಸುತ್ತಾರೆ. ಅಲ್ಲದೇ ಸೂಕ್ತ ಮಾರ್ಗದರ್ಶನವನ್ನು ನೀಡುತ್ತಾರೆ. ವಿದ್ಯಾರ್ಥಿಗಳು ವಿಷಯದ ಬಗ್ಗೆ ಯಾವುದೇ ಸಂದೇಹಗಳಿದ್ದಲ್ಲಿ ತರಬೇತುದಾರರನ್ನು ಒಳಗೊಂಡು ಗುಂಪು ಚರ್ಚೆಯ ಮೂಲಕ ಬಗೆಹರಿಸಿಕೊಳ್ಳುವುದರ ಜೊತೆಗೆ ಜ್ಞಾನವನ್ನು ವೃದ್ಧಿಸಿಕೊಳ್ಳಬಹುದು ಎಂದು ನುಡಿದರು. ವಿದ್ಯಾರ್ಥಿಗಳು ಪ್ರತಿ ದಿನ ಕನಿಷ್ಠ ಒಂದು ಗಂಟೆಗಳ ಕಾಲ ಅಧ್ಯಯನ ಮಾಡುವುದರೊಂದಿಗೆ ಗುಣ ಮಟ್ಟದ ಹಾಗೂ ಶಿಸ್ತುಬದ್ಧ ಅಧ್ಯಯನಕ್ಕೆ ಪ್ರಾಮುಖ್ಯತೆಯನ್ನು ನೀಡಬೇಕೆಂದು ನುಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಪಿಇಎಸ್ ಟ್ರಸ್ಟ್‌ನ ಮುಖ್ಯ ಆಡಳಿತ ಸಂಯೋಜನಾಧಿಕಾರಿಗಳಾದ ಡಾ. ಆರ್. ನಾಗರಾಜರವರು ತಮ್ಮ ಸ್ವ ಅನುಭವವನ್ನು ಹಂಚಿಕೊಳ್ಳುತ್ತಾ ಯಶಸ್ಸು ಎಂಬುದು ಸದಾ ಸತತ ಪರಿಶ್ರಮದ ಮೂಲಕ ಲಭಿಸುತ್ತದೆ. ಹಾಗೆಯೇ ವಿದ್ಯಾರ್ಥಿಗಳು ಸ್ಫೂರ್ತಿಯನ್ನು ಕಳೆದುಕೊಳ್ಳದೆ, ನಿರಂತರ ಪ್ರಯತ್ನವನ್ನು ನಿಲ್ಲಿಸದೆ ತಮ್ಮ ಗುರಿಯನ್ನು ಸಾಧಿಸಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲ ಡಾ. ಕೆ. ಸಾಯಿಲತ, ಬಿಬಿಎ ಮತ್ತು ಬಿ.ಕಾಂ ವಿಭಾಗದ ಮುಖ್ಯಸ್ಥ ಡಾ. ಜಿ.ಎಂ.ಸುದರ್ಶನ್ ಹಾಗೂ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ವರ್ಗದವರು ಹಾಜರಿದ್ದರು. ಕು. ಸ್ವಾತಿ .ಜೆ ಸ್ವಾಗತಿಸಿ, ಕು. ಶ್ವೇತ ಪ್ರಾರ್ಥಿಸಿ, ಕು. ರೂಪಶ್ರೀ ವಂದಿಸಿ, ರಶ್ಮಿ . ಎ. ಆರ್ ನಿರೂಪಿಸಿದರು.

K. Sailatha
Principal
PES Institute of Advanced Management Studies
NH 206, Sagar Road
SHIVAMOGGA-577 204

PES INSTITUTE OF ADVANCED MANAGEMENT STUDIES ★ SHIVAMOGGA